# ಸರಕಾರಿ ಶಾಲಾ ವ್ಯವಸ್ಥೆ: ನಮ್ಮ ಅನುಭವ[1]

ಆನಂದ ಸ್ವಾಮಿನಾಥನ್

---

**ಜನಪ್ರಿಯ ಕಥನ**

ಜನಪ್ರಿಯ ಕಥನದ ಪ್ರಕಾರ, ಸರಕಾರಿ ಶಾಲೆ[2]ಗಳೆಂದರೆ ಎರಡನೆಯ ದರ್ಜೆಯದ್ದು ಮತ್ತು ಸೋಲುವಂಥದ್ದೇ ಆಗಿದೆ. ಅವುಗಳಿಗೆ ಇರುವುದು ಅಸಮರ್ಪಕ ಮತ್ತು ನಿರ್ಲಕ್ಷಿತ ಮೂಲಸೌಕರ್ಯ. ಅಲ್ಲಿ ಅಧ್ಯಾಪಕರು ಶಾಲೆಗೆ ಬರುವುದಿಲ್ಲ ಅಥವಾ ಬಂದರೂ ಪಾಠ ಮಾಡುವುದಿಲ್ಲ ಅಥವಾ ಪಾಠ ಮಾಡಿದರೂ ವಿದ್ಯಾರ್ಥಿಗಳು ಕಲಿಯುವುದಿಲ್ಲ. ಅನೇಕ ವರ್ಷಗಳ ಕಾಲ ಶಾಲೆಗೆ ಹೋಗುತ್ತಿದ್ದರೂ ಬಹುತೇಕ ಸರಕಾರಿ ಶಾಲೆಗಳ ಮಕ್ಕಳಿಗೆ ಓದು, ಬರಹ, ಸಾಮಾನ್ಯ ಗಣಿತ ಬರುವುದಿಲ್ಲ. ಕೇವಲ ಬಡವರು ಮಾತ್ರ ತಮ್ಮ ಮಕ್ಕಳನ್ನು ಸ್ಥಳೀಯ ಸರಕಾರಿ ಶಾಲೆಗಳಿಗೆ ಕಳುಹಿಸುತ್ತಾರೆ; ಅವರಿಗೆ ಆಯ್ಕೆ ಇದ್ದರೆ, ಅವರು ಉತ್ತಮ ಮಟ್ಟದ ಖಾಸಗಿ ಶಾಲೆಗಳಿಗೇ ಪ್ರಾಧಾನ್ಯ ನೀಡುತ್ತಾರೆ. ಸರಕಾರಿ ಶಾಲಾ ವ್ಯವಸ್ಥೆ ಎಂದರೆ ಯಾವುದೇ ಸುಧಾರಣೆಯ ಆಶಾಭಾವನೆ ಇಲ್ಲದ ವ್ಯವಸ್ಥೆ.

ಈ ಕಥನವನ್ನು ಮುಖ್ಯಧಾರೆಯ ಮಾಧ್ಯಮಗಳು ಮತ್ತು ನಾಗರಿಕ ಸಮಾಜದ ಬಹುಸಂಖ್ಯೆಯ ನವ–ಉದಾರವಾದಿ ಧ್ವನಿಗಳು ಪಾಡುತ್ತಲೇ ಬಂದಿವೆ. ಇದೆಷ್ಟು ಪಾರುಪತ್ಯ ಸ್ಥಾಪಿಸಿದ ಕಥನ ಎಂದರೆ ಇದಕ್ಕೆ ತದ್ವಿರುದ್ಧವಾದ ಇನ್ನಾವುದೇ ಅನುಭವ ಅಥವಾ ಸಾಕ್ಷ್ಯ ಇದ್ದರೂ ಅದು ಕೇಳಿಸುವುದೇ ಇಲ್ಲ. ಈ ಏಕತಾನತೆಯ ವಾಸ್ತವ ಎಷ್ಟು ಮತ್ತು ಕಲ್ಪನೆ ಎಷ್ಟು ಎನ್ನುವುದನ್ನು ಈ ಲೇಖನ ಪರೀಕ್ಷಿಸುತ್ತದೆ.

ಭಾರತದ ಒಳನಾಡಿನ ಅತ್ಯಂತ ಗ್ರಾಮೀಣ ಮತ್ತು ಸೌಲಭ್ಯ ವಂಚಿತ ಜಿಲ್ಲೆಗಳಲ್ಲಿನ ಸರಕಾರಿ ಶಾಲಾ ವ್ಯವಸ್ಥೆಯೊಂದಿಗೆ 2001ರಿಂದಲೇ ಅಜೀಮ್ ಪ್ರೇಮ್‌ಜೀ ಪ್ರತಿಷ್ಠಾನವು ಕಾರ್ಯನಿರ್ವಹಿಸುತ್ತಿದೆ. ಪ್ರತಿ ದಿನ ಬಹಳ ದೂರದಲ್ಲಿ ರ್‍ಯಾಡಾರ್‌ನ ಪರಿಧಿಯಾಚೆಗೆ ಇರುವ ಸರಕಾರಿ ಶಾಲೆಗಳಿಗೆ ನಮ್ಮ ತಂಡಗಳು ತೆರಳುತ್ತವೆ. ರಾಜಸ್ತಾನದ ಮರುಭೂಮಿಗೆ, ಉತ್ತರಾಖಂಡದ ಮಲೆಗಳಿಗೆ, ಮಧ್ಯಭಾರತದ ಬುಡಕಟ್ಟು ವಲಯಗಳಿಗೆ ಇನ್ನೂ ಇತರ ಅನೇಕ ಪ್ರದೇಶಗಳಿಗೆ ನಮ್ಮ ತಂಡಗಳು ತೆರಳುತ್ತವೆ.

ಪ್ರತಿವರ್ಷ ಸಾವಿರಾರು ಶಿಕ್ಷಕರು ಮತ್ತು ಇತರರ ಜತೆಗೆ ನಮ್ಮ ನಿರಂತರ ಕ್ಷೇತ್ರಕಾರ್ಯ ಕೇಂದ್ರಿತ ಸಹಭಾಗಿತ್ವ ನಮಗೆ ಸರಕಾರಿ ಶಾಲಾ ವ್ಯವಸ್ಥೆಯ ಸ್ಫೂರ್ತಿ ಮತ್ತು ವಿಧಾನಗಳ ಕುರಿತ ಆಳವಾದ ಒಳನೋಟಗಳನ್ನು ನೀಡಿವೆ. ಈ ಅನುಭವಗಳು ಬಹಳಷ್ಟು ಸಲ ಜನಪ್ರಿಯ ಹೀನಾರ್ಥದ ವಿವರಣೆಗಿಂತ ಭಿನ್ನ ಎನ್ನುವುದನ್ನು ಈಗ ಹೇಳಲೇ ಬೇಕಾಗಿದೆ.

**ಚೌಕಟ್ಟಿನಲ್ಲಿ ಇರಿಸಿದ ಚಿತ್ರ**

ಕಳೆದ ಮೂರು ದಶಕಗಳಿಂದ ಪ್ರತಿಯೊಂದು ಗ್ರಾಮವೂ ಶಾಲೆ ಹೊಂದಿರಬೇಕಾದ ಒತ್ತಡದಲ್ಲಿ ಭಾರತ ಸಿಲುಕಿ ಹಾಕಿಕೊಂಡಿದೆ. ಇವತ್ತು ಸರಕಾರಿ ಪ್ರಾಥಮಿಕ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳು ಭಾರತದ ಸಾರ್ವಜನಿಕ ವ್ಯವಸ್ಥೆಯ ಸಾರ್ವತ್ರಿಕ ಸಂಕೇತಗಳಾಗಿವೆ. ದೇಶದ ಯಾವುದೇ ಭಾಗದಲ್ಲಿರುವ ಗ್ರಾಮಕ್ಕೆ ಹೋಗಿ, ಅದು ಎಷ್ಟೇ ದೂರ ಇರಲಿ ಅಥವಾ ಸಂಪರ್ಕ ರಹಿತವೇ ಆಗಿರಲಿ, ಎಲ್ಲ ಸಾಧ್ಯತೆಗಳಂತೆ ಅಲ್ಲೊಂದು ಸರಕಾರಿ ಶಾಲೆ ನೀವು ನೋಡುತ್ತೀರಿ. ನಮ್ಮಂಥ ಇಷ್ಟೊಂದು ವಿಸ್ತಾರವಾದ ದೇಶದಲ್ಲಿ, ಅನೇಕ ರೀತಿಯ ಭೌಗೋಳಿಕತೆ ಇರುವ ಪ್ರದೇಶದಲ್ಲಿ ಇದೊಂದು ಸಾಧನೆಯೇ ಸರಿ.

---

1 ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಎನ್ನುವ ಪದ ವ್ಯಾಪಕ ವ್ಯಾಖ್ಯಾನ ಮತ್ತು ವಿಮರ್ಶೆಗೆ ತೆರೆದುಕೊಂಡಿದೆ. ಉದಾಹರಣೆಗೆ: ಸರಕಾರ ನಡೆಸುವ ಶಾಲೆಗಳಿಗೆ ಮಾತ್ರ ಈ ಪದವನ್ನು ಸೀಮಿತಗೊಳಿಸಬೇಕೆ? ಅಥವಾ ಸರಕಾರ ನಡೆಸದೇ ಇರುವ ಆದರೆ ಅದರ ನಿಯಂತ್ರಣಕ್ಕೊಳಪಟ್ಟ ಶಾಲೆಗಳನ್ನೂ ಇದರಲ್ಲಿ ಒಳಗೊಳ್ಳಿಸಬೇಕೆ? ಬಹುಭಾಗ ನಾಗರಿಕರು ತ್ಯಜಿಸಿದ ವ್ಯವಸ್ಥೆಯನ್ನು ನಿಜವಾಗಿ ಸಾರ್ವಜನಿಕ ಎಂದು ಕರೆಯಬೇಕೆ? ಇದು ಅಝೀಮ್ ಪ್ರೇಮ್‌ಜೀ ಪ್ರತಿಷ್ಠಾನವು ಸರಕಾರಿ ಶಾಲೆಗಳ ಜತೆಗೆ ಕಾರ್ಯನಿರ್ವಹಿಸಿ ಪಡೆದ ಅನುಭವ ಆದುದರಿಂದ ನಾನು ಈ ಪದವನ್ನು ಹೆಚ್ಚು ನಿಖರವಾಗಿ ಸರಕಾರಿ ಶಾಲಾ ವ್ಯವಸ್ಥೆ ಎಂದೇ ಕರೆಯುತ್ತೇನೆ.

2 ಇನ್ನೊಂದು ಹೋಲಿಕೆ ನೀಡುವುದಾದರೆ ಭಾರತದಲ್ಲಿ 1.5 ಲಕ್ಷ ಅಂಚೆಕಚೇರಿಗಳಿವೆ.

ಹತ್ತಿರ ಹತ್ತಿರ ಹನ್ನೊಂದು ಲಕ್ಷ[3] ಪ್ರಾಥಮಿಕ ಶಾಲೆಗಳು ಇದ್ದು, ನಾವು ಜಗತ್ತಿನ ಅತ್ಯಂತ ದೊಡ್ಡ ಸರಕಾರಿ ಶಾಲಾ ವ್ಯವಸ್ಥೆಯನ್ನು ಹೊಂದಿದ್ದೇವೆ. ಶಾಲಾ ದಾಖಲಾತಿ ಎನ್ನುವುದು ಸಾರ್ವತ್ರಿಕವಾಗಿದ್ದು, ಇಲ್ಲಿ ಯಾವುದೇ ಲಿಂಗ, ಜಾತಿ, ಧರ್ಮ ಭೇದಗಳಿಲ್ಲ. 30 ವರ್ಷಗಳ ಹಿಂದೆ ನಮ್ಮಲ್ಲಿ ಅರ್ಧದಷ್ಟು ಹುಡುಗಿಯರು ಮಾತ್ರ ಶಾಲೆಗಳಲ್ಲಿ ಇದ್ದರು ಎನ್ನುವುದನ್ನು ಪರಿಗಣಿಸಿದರೆ ಇದು ಆಶ್ಚರ್ಯ ಅನ್ನಿಸುವುದಿಲ್ಲವೆ? ಇದೆಲ್ಲ ಆಕಸ್ಮಿಕವಾಗಿ ನಡೆಯಲಿಲ್ಲ. ಇದೆಲ್ಲವೂ ವ್ಯವಸ್ಥಿತವಾದ ಶ್ರಮದಿಂದಲೇ ನಡೆದಿದೆ. ಈ ದೇಶದ ಪ್ರತಿಯೊಬ್ಬ ಮಗುವೂ, ಅದು ಯಾರೇ ಆಗಲಿ, ಎಲ್ಲೇ ವಾಸಿಸುತ್ತಿರಲಿ, ಅದಕ್ಕೆ ಶಾಲೆಯ ಸಂಪರ್ಕ ಸಿಗಬೇಕೆನ್ನುವ ಶ್ರಮ ಅದು.[4] ಈ ಸರಕಾರಿ ವ್ಯವಸ್ಥೆಯನ್ನು ಪ್ರತಿಫಲಿಸುವಾಗ ಈ ದೃಷ್ಟಿಕೋನ, ಅಂದರೆ ಅದರ ಶುದ್ಧ ಪ್ರಮಾಣ ಮತ್ತು ಸಂಕೀರ್ಣತೆ ಮತ್ತು ಅದರ ಪ್ರಮುಖ ಅಭಿವೃದ್ಧಿ, ಇದು ಗಮನದಲ್ಲಿಡಬೇಕಾದ ಮುಖ್ಯ ಅಂಶಗಳಾಗುತ್ತವೆ. ಇವೆಲ್ಲ ಆರೋಗ್ಯಕರವಾದ ಬೆಳೆಯುತ್ತಿರುವ ವ್ಯವಸ್ಥೆಯೊಂದರ ಸೂಚಕಗಳೋ ಸಂಕೇತಗಳೋ ಆಗುತ್ತವೆ.

**ಸರಕಾರಿ ಶಾಲೆಗಳ ಕಾರ್ಯಾಚರಣೆ**

ಕಳೆದೊಂದು ದಶಕ ಅಥವಾ ಅದಕ್ಕೂ ಹೆಚ್ಚಿನ ಕಾಲಘಟ್ಟದಲ್ಲಿ ಅಜೀಮ್ ಪ್ರೇಮ್‌ಜೀ ಪ್ರತಿಷ್ಠಾನದ ನಾವೆಲ್ಲ ಸಾವಿರಾರು ಸರಕಾರಿ ಶಾಲೆಗಳನ್ನು ಸಂದರ್ಶಿಸಿದ್ದೇವೆ. ಈ ಸಂದರ್ಶನಗಳೆಲ್ಲ ಸಣ್ಣ ಸಂದರ್ಶನಗಳೋ, ಒಂದೇ ಸಂದರ್ಶನಕ್ಕೆ ಮುಗಿದು ಹೋಗುವಂಥವುಗಳೋ ಅಲ್ಲ. ಮೊದಲೇ ಹಾಕಿಕೊಂಡ ಯೋಜನೆಯಂತೆ ಅತ್ಯಂತ ಹಿಂದುಳಿದ ಜಿಲ್ಲೆಗಳ ಅತ್ಯಂತ ಕುಗ್ರಾಮದಲ್ಲಿರುವ ಶಾಲೆಗಳಲ್ಲೇ ನಾವು ಹೆಚ್ಚಾಗಿ ಇರುತ್ತಿದ್ದೆವು.

ಶಾಲೆಗಳಿಗೆ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಬರುವುದನ್ನೂ, ನಿಜವಾದ ಬೋಧನೆ–ಕಲಿಕೆಯ ಪ್ರಯತ್ನ ನಡೆಯುವುದನ್ನೂ ನಾವು ಅನೇಕ ಸಲ ನೋಡಿದ್ದೇವೆ. ಸರಕಾರಿ ಮತ್ತು ಖಾಸಗಿ ಶಾಲೆಗಳ ಸುತ್ತ ಏಳುತ್ತಿರುವ ಚರ್ಚೆಯ ಪರಿಚಯ ಇಲ್ಲದವರಿಗೆ, ಇದೊಂದು ಮೂಲಭೂತ ಹಕ್ಕಿನಂತೆ ತೋರಬಹುದಾಗಿದೆ ಅಥವಾ ಇದಕ್ಕಿಂತ ಹೆಚ್ಚು ಒಂದು ಶಾಲೆಯಿಂದ ಏನು ನಿರೀಕ್ಷಿಸಬಹುದು? ಇದಕ್ಕಿಂತ ವಿಭಿನ್ನವಾಗಿ ಯೋಚಿಸುವವರದ್ದು ಧರ್ಮನಿಂದನೆಗಿಂತ ಕಡಿಮೆಯದ್ದೇನೂ ಅಲ್ಲ. [5]

ಇದಕ್ಕೂ ಹೆಚ್ಚುವರಿಯಾಗಿ, ಶಾಲೆಗಳಲ್ಲಿ ಸಾಕಷ್ಟು ಕೊಠಡಿಗಳಿವೆ, ಕುಡಿಯುವ ನೀರಿನ ವ್ಯವಸ್ಥೆ ಇದೆ, ಹುಡುಗ–ಹುಡುಗಿಯರಿಗೆ ಶೌಚಾಲಯ ಇದೆ, ವ್ಯವಸ್ಥಿತ ನಿರ್ವಹಣೆಯ ಮಧ್ಯಾಹ್ನದ ಭೋಜನ ಇದೆ. ಈ ಊಟ ಅನೇಕ ವಿದ್ಯಾರ್ಥಿಗಳಿಗೆ ಅವರ ದಿನದ ಮಹತ್ವದ ಊಟ ಕೂಡಾ ಹೌದು. [6,7]

ಸರಕಾರ ಕೂಡ ಇದನ್ನು ಉತ್ತಮವಾಗಿ ನಡೆಸುವುದಕ್ಕೆ ಪ್ರಯತ್ನಿಸುತ್ತಿದೆ, ಅದೂ 11 ಲಕ್ಷ ಚದುರಿದ ಪ್ರದೇಶಗಳಲ್ಲಿ ಪ್ರತಿದಿನ ಇಂತಹ ಪ್ರಯತ್ನ ನಡೆಯುತ್ತಿದೆ ಎಂದರೆ ಅಂತಹ ಆಡಳಿತ ಅಧ್ಯಯನಕ್ಕೆ ಯೋಗ್ಯವಾಗುತ್ತದೆ.

---

3

4 ಇಲ್ಲಿ ಇನ್ನೊಂದು ವಾದವೂ ಇದೆ. ಅದೆಂದರೆ ವ್ಯಾಪಕ ಪ್ರಮಾಣದ ವಿಸ್ತರಣೆ ಒಳಿತು ಮಾಡಿದ್ದಕ್ಕಿಂತ ಕೆಡುಕು ಮಾಡಿದ್ದೇ ಹೆಚ್ಚು. ನಮ್ಮಲ್ಲಿ ಸಣ್ಣ ಶಾಲೆಗಳೇ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಇವೆ (<20–30 ಮಕ್ಕಳು ಮತ್ತು 1–2 ಅಧ್ಯಾಪಕರು). ಇವು ಶೈಕ್ಷಣಿಕವಾಗಿಯಾಗಲೀ, ಆರ್ಥಿಕವಾಗಿಯಾಗಲೀ, ಆಡಳಿತಾತ್ಮಕವಾಗಿಯಾಗಲೀ ಕಾರ್ಯಸಾಧುವಲ್ಲ. ಈ ವಿವೇಕವನ್ನು ನಾವು ಪುನರಾವಲೋಕನ ಮಾಡಬೇಕಾಗಿದೆ.

5 ಸರಕಾರಿ ಶಾಲೆಗಳನ್ನು ಮತ್ತು ಅಧ್ಯಾಪಕರನ್ನು ವಿಮರ್ಶೆ ಮಾಡುವುದು ಈಗೀಗ ವೈಖರಿಯಾಗಿಬಿಟ್ಟಿದೆ. ಕೆಲವು ವಿಮರ್ಶೆಗಳಿಗೆ ಆಧಾರ ಇದೆ. ಅದನ್ನು ನಾವು ಇನ್ನಷ್ಟು ಶೋಧಿಸಬೇಕಾಗಿದೆ. ಆದರೆ ಎಲ್ಲವನ್ನೂ ವಿಫಲ ವ್ಯವಸ್ಥೆ ಎಂಬ ಇದೇ ಕಥನದಲ್ಲಿ ತುಂಬಿದರೆ ಅದು ಕಲ್ಪನೆಯ ಸೆರಗು ಸೇರುತ್ತದೆ. ಈ ಸರಕಾರಿ ಶಾಲಾ ಮೇಲಿನ ಆಕ್ರಮಣಕಾರರೂ, ಖಾಸಗಿ ಶಾಲೆಗಳ ಶಪಥ ತೆಗೆದುಕೊಂಡಂತಿರುವ ಅವರ ಅಭಿಮಾನಿಗಳೂ ಇದ್ದಾರೆ. ಎರಡನೆಯ ಬಗೆಯವರೇ ಹೆಚ್ಚು.

6 ಎಲ್ಲ ಸರಕಾರಿ ಶಾಲೆಗಳಲ್ಲೂ ಸಾಕಷ್ಟು ತರಗತಿಕೊಠಡಿಗಳಿರುತ್ತವೆ ಎಂದು ಹೇಳುವುದಿಲ್ಲ. ಸಣ್ಣ ಆದರೆ ಮಹತ್ವದ ಪಾಲಿನಷ್ಟು ಶಾಲೆಗಳು ಸೂಕ್ತ ಮೂಲಸೌಕರ್ಯ ಇಲ್ಲದ ಶಾಲೆಗಳಾಗಿವೆ. ಆದರೆ ಅದು ಸಾಮಾನ್ಯ ನಿಯಮ ಅಲ್ಲ.

7 ಅನೇಕ ಶಾಲೆಗಳಿಗೆ ಶಾಲೆಯ ನಿರ್ವಹಣೆ ನೋಡಿಕೊಳ್ಳುವುದಕ್ಕೆ ಸಾಕಷ್ಟು ಆರ್ಥಿಕತೆ ಇದೆ. ಅಂದರೆ ಸಾಮಾನ್ಯವಾಗಿ ಸರಕಾರಿ ಶಾಲೆಗಳ ಅನೇಕ ಸೌಲಭ್ಯಗಳ ಬಡ ರಿಪೇರಿ ಕಾಣಿಸುತ್ತದೆ: ತರಗತಿಗಳಿಗೆ ಬಣ್ಣ ಬೇಕು, ಶೌಚಾಲಯದಲ್ಲಿ ಪ್ಲಂಬಿಂಗ್ ಸಮಸ್ಯೆ, ಬಯಲಿನಲ್ಲಿ ಕಳೆ ಬೆಳೆದಿರುತ್ತದೆ ಇತ್ಯಾದಿ.

**ಹಾಗಾದರೆ, ವಿದ್ಯಾರ್ಥಿಗಳು ಇಲ್ಲಿ ಯಾಕೆ ಸಾಕಷ್ಟು ಕಲಿಯುತ್ತಿಲ್ಲ?**

ಬೋಧನೆಯ ಅಸಲೀ ಪ್ರಯತ್ನಗಳ ನಂತರವೂ, ಅನೇಕ ವರ್ಷಗಳ ಕಾಲ ಶಾಲೆಯಲ್ಲಿ ಕಳೆದರೂ ವಿದ್ಯಾರ್ಥಿಗಳು ಕಲಿಕೆಗಾಗಿ ಕಷ್ಟಪಡುವುದೇಕೆ ಎನ್ನುವುದು ಶಾಲಾ ವ್ಯವಸ್ಥೆಯಲ್ಲೊಂದು ದೊಡ್ಡ ರಹಸ್ಯವಾಗಿದೆ. ಪ್ರತೀ ಗ್ರೇಡ್‌ನಲ್ಲೂ ವಿದ್ಯಾರ್ಥಿಗಳು ಸರಾಸರಿ 40ರಿಂದ 50 %ದಷ್ಟು ಶಾಲಾ ಪರಿಕಲ್ಪನೆಗಳನ್ನು ಮಾತ್ರ ನಿರೀಕ್ಷಿತ ಪ್ರಮಾಣದಲ್ಲಿ ಕಲಿಯುತ್ತಾರೆ. [8]

ಅಧ್ಯಾಪಕರ ಸುತ್ತ ಒಂದು ವಾದ ಕೇಳಿಸುತ್ತಿದೆ. ಅದು ಹೀಗಿದೆ: ಅಧ್ಯಾಪನ ಎನ್ನುವುದು ಮಹತ್ವಾಕಾಂಕ್ಷೆಯ ಅಥವಾ ಉತ್ತಮ ಸಂಬಳ ಕೊಡುವ ವೃತ್ತಿಯಲ್ಲ. ಇದು ಯಾವುದೇ ಇತರ ವೃತ್ತಿ ಆಯ್ಕೆ ಇಲ್ಲದವರನ್ನಷ್ಟೇ ಆಕರ್ಷಿಸುತ್ತಿದೆ. ಅಂತಹ ಅಧ್ಯಾಪಕರಿಂದ ಇನ್ನೇನು ನಿರೀಕ್ಷಿಸುವುದಕ್ಕೆ ಸಾಧ್ಯ?

ಈಗ ಅಂತಹ ವಾದಕ್ಕೆ ನಿಜವಾಗಿಯೂ ಯಾವುದೇ ಅಡಿಪಾಯ ಇಲ್ಲ. ಮೊದಲನೆಯದಾಗಿ ಸರಕಾರಿ ಶಾಲೆಯ ಅಧ್ಯಾಪಕನಾಗಬೇಕೆನ್ನುವುದು ಅನೇಕರಿಗೆ ಮಹತ್ವಾಕಾಂಕ್ಷೆಯೇ ಆಗಿದೆ; ದೇಶದ ಅನೇಕ ಪಟ್ಟಣ ಮತ್ತು ಗ್ರಾಮಗಳಲ್ಲಿ ಇತರ ಆಯ್ಕೆಗಳಿಗಿಂತ ಸರಕಾರಿ ಶಾಲಾ ಅಧ್ಯಾಪಕ ವೃತ್ತಿ ಹೆಚ್ಚು ಆದ್ಯತೆಯನ್ನು ಪಡೆಯುತ್ತಿದೆ. ಈಗ ಉತ್ತಮ ಸೇವಾ ನಿಯಮಗಳನ್ನೂ ಈ ಉದ್ಯೋಗ ಒದಗಿಸುತ್ತಿದೆ.[9] ಎರಡನೆಯದಾಗಿ, ಒಳ್ಳೆಯ ಅಧ್ಯಾಪಕರಾಗುವುದು ಎನ್ನುವುದು ಕೆಲವೇ ಕೆಲವು ಮಂದಿಯ ಜ್ಞಾನ ಅಲ್ಲ. ಸೂಕ್ತ ಶಿಕ್ಷಣ ಮತ್ತು ಅಭ್ಯಾಸದ ಮೂಲಕ ಬಹುತೇಕ ಮಂದಿ ಸಮರ್ಥ ಶಿಕ್ಷಕರಾಗಿ ವಿಕಾಸ ಹೊಂದಬಹುದಾಗಿದೆ.

ವಿದ್ಯಾರ್ಥಿಗಳ ಸಾಮಾಜಿಕ ಅರ್ಥಿಕ ಹಿನ್ನೆಲೆಗಳಿಗೂ ಅವರ ಶೈಕ್ಷಣಿಕ ಸಾಧನೆಗೂ ಬಲವಾದ ಸಂಬಂಧ ಇದೆ ಎಂದು ಕೆಲವರು ವಾದಿಸುತ್ತಾರೆ. ಅಂದರೆ ಅನುಕೂಲಸ್ಥ ಮನೆಯ ಮಕ್ಕಳಿಗಿಂತ ಅನುಕೂಲ ಇಲ್ಲದವರ ಮನೆಯ ಮಕ್ಕಳ ಕಲಿಕಾ ಮಟ್ಟ ಕೆಳಮಟ್ಟದಲ್ಲಿ ಇರುತ್ತದೆ ಎನ್ನುವುದು ಅವರ ವಾದ. ಸರಕಾರಿ ಶಾಲೆಗಳಲ್ಲಿ ಕಲಿಯುವ ಬಹುಸಂಖ್ಯಾಕ ಮಕ್ಕಳೂ ಬಡಮನೆಗಳಿಂದ ಬರುವವರೇ ಆಗಿದ್ದು, ಅವರ ಕಲಿಕೆ ಕೆಳಮಟ್ಟದಲ್ಲೇ ಇದೆ. ಹಾಗಾಗಿ ಈ 'ಬಡ ಕಲಿಕೆ'ಯನ್ನು ನಿವಾರಿಸುವುದಕ್ಕೆ ಇರುವ ವ್ಯವಸ್ಥಿತ ಪರಿಹಾರ ಎಂದರೆ ಅವರ ಬಡತನದ ಮಟ್ಟ ಕಡಿಮೆ ಮಾಡುವುದೇ ಆಗಿದೆ.

ಈ ವಾದ ಮೂರು ಮುಖ್ಯ ಅಂಶಗಳನ್ನು ಬಿಟ್ಟುಬಿಟ್ಟಿದೆ. ಇದೊಂದು ನೈತಿಕವಾಗಿ ಬಂಜರಾಗಿರುವ ಆಲೋಚನೆ. ಯಾಕೆಂದರೆ ಇಲ್ಲಿ ವಿದ್ಯಾರ್ಥಿಯ ಕಲಿಕೆಯನ್ನು ಕೇವಲ ಅವನು ಜನಿಸಿದ ಕುಟುಂಬದ ಹಿನ್ನೆಲೆಯಲ್ಲಿ ನಿರ್ಧರಿಸಲಾಗುತ್ತದೆ. ಒಬ್ಬನ ಹುಟ್ಟಿನ ಹಿನ್ನೆಲೆಯಲ್ಲಿ ಆತನ ಸಾಮರ್ಥ್ಯ ಮತ್ತು ಆಯ್ಕೆ ನಿರ್ಧಾರಗೊಳ್ಳುತ್ತದೆ ಎನ್ನುವುದು ಪ್ರಜಾಪ್ರಭುತ್ವದ ಆಕಾಂಕ್ಷೆ ಇರುವ ರಾಷ್ಟ್ರವೊಂದರಲ್ಲಿ ಇಂತಹ ವಾದ ವಿಷಯದ ಎದೆಗೇ ಬಡಿಯುತ್ತದೆ.

ಎರಡನೆಯದು, ಉಳ್ಳವರ ಮನೆಯ ಮಕ್ಕಳು ಕಲಿಕೆಯ ಫಲಿತಾಂಶದಲ್ಲಿ ಚೆನ್ನಾಗಿ ಇರುವುದಕ್ಕೆ ಕಾರಣ ಅವರಿಗೆ ಮನೆಯಲ್ಲಿ ಶೈಕ್ಷಣಿಕ ಅವಕಾಶ ಸಿಗುತ್ತದೆ ಎನ್ನುವುದನ್ನು ಹೊಸ ಸಾಕ್ಷ್ಯಗಳು ಹೇಳುತ್ತಿವೆ. ಉದಾಹರಣೆಗೆ, ನಗರದ ಮಧ್ಯಮ ವರ್ಗದ ಮಗುವಿಗೆ ಮಕ್ಕಳ ಪುಸ್ತಕಗಳು ಸಿಗುವ ಅವಕಾಶ ಹೆಚ್ಚೇ ಇರುತ್ತದೆ; ತಮ್ಮ ಕುಟುಂಬದವರ ಜೀವನೋಪಾಯಕ್ಕೆ ನೆರವಾಗಲು ದುಡಿಯಬೇಕಾದ ಅವಕಾಶ ಆ ಮಗುವಿಗೆ ಕಡಿಮೆ ಇರುತ್ತದೆ. ಈಗ ಸಕಾರಾತ್ಮಕ ಕ್ರಿಯೆಗಳು ಇಂತಹ ಕೆಲವು ವ್ಯತ್ಯಾಸಗಳನ್ನು ಪರಿಹರಿಸಬಹುದು– ಸರಕಾರಿ ಶಾಲೆಗೆ ಉತ್ತಮ ಗ್ರಂಥಾಲಯ ಒದಗಿಸುವ ಅಥವಾ ವಿದ್ಯಾರ್ಥಿವೇತನವನ್ನು ನೀಡುವ ಮೂಲಕ ನಿಜವಾದ ಬಡ ಮನೆಗಳ ಆದಾಯಕ್ಕೆ ಬದಲಿ ವ್ಯವಸ್ಥೆ ಮಾಡಿಕೊಳ್ಳುವುದು.

---

8 ನಮ್ಮ ಆಂತರಿಕ ಮೌಲ್ಯಮಾಪನ ಆಧಾರಿತ ಇದು. ಆದರೆ ವಿಸ್ತಾರವಾದ ಅರ್ಥದಲ್ಲಿ ವಿವಿಧ ಅಧ್ಯಯನಗಳ ಮೂಲಕ ಮತ್ತೆ ಮತ್ತೆ ಈ ಬಡ ವಿದ್ಯಾರ್ಥಿ ಕಲಿಕೆ ಮತ್ತೆ ಮತ್ತೆ ಸಾಬೀತಾಗುತ್ತಲೇ ಇದೆ. ಹೆಚ್ಚು ಕಡಿಮೆ ಈ ವಿಚಾರದಲ್ಲಿ ಎಲ್ಲರಿಗೂ ಬಹುಶಃ ಸಹಮತ ಇದೆ.

9 ದೊಡ್ಡ ಸಂಖ್ಯೆಯಲ್ಲಿ ಪ್ಯಾರಾ ಶಿಕ್ಷಕರು ಅಥವಾ ಪರ್ಯಾಯ ಶಿಕ್ಷಕರನ್ನು ದೊಡ್ಡ ಸಂಖ್ಯೆಯಲ್ಲಿ ನೇಮಕ ಮಾಡುತ್ತಿರುವುದು ಅನೇಕ ಸರಕಾರಗಳ ದೂರದೃಷ್ಟಿ ಇಲ್ಲದ ಕ್ರಮಗಳೇ ಆಗಿವೆ. ಇಂತಹ ಶಿಕ್ಷಕರಿಗೆ ಬೇಕಾದ ಯಾವುದೇ ಶೈಕ್ಷಣಿಕ ಅರ್ಹತೆಗಳಿರುವುದಿಲ್ಲ. ಅವರನ್ನು ಖಾಯಂ ಶಿಕ್ಷಕರಿಗಿಂತ ಅತ್ಯಂತ ಕಡಿಮೆ ಸಂಬಳಕ್ಕೆ ಸಣ್ಣ ಅವಧಿಕೆ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲಾಗುತ್ತದೆ. ಇದು ದೇಶದಲ್ಲೇ ಶಿಕ್ಷಣ ವೃತ್ತಿಯನ್ನು ಅತ್ಯಂತ ಕ್ರೂರವಾಗಿ ಕೆಳಸ್ತರಕ್ಕೆ ಒಯ್ದಿದೆ. ಸೌಭಾಗ್ಯ ಎಂದರೆ 2009ರ ಶಿಕ್ಷಣ ಹಕ್ಕಿನ ಪ್ರಕಾರ ಇಂತಹ ಆಚರಣೆ ಈಗ ಅಕ್ರಮ ಎನ್ನಿಸಿಕೊಂಡಿವೆ.

ಮೂರನೆಯದು, ಈ ದೃಷ್ಟಿಕೋನಕ್ಕೆ ಶೈಕ್ಷಣಿಕ ತೂಕ ಇಲ್ಲ. ಉತ್ತಮ ಬೋಧನೆಯ ಮೂಲಕ ಯಾವ ವಿದ್ಯಾರ್ಥಿಯೂ ಪ್ರಾಥಮಿಕ ಪಠ್ಯಕ್ರಮದ ಮೇಲೆ ಪ್ರಭುತ್ವ ಹೊಂದಬಹುದು ಎಂದು ಯಾವುದೇ ಯೋಗ್ಯ ಅಧ್ಯಾಪಕ ಹೇಳಬಲ್ಲ.

**ಅಧ್ಯಾಪಕರು ಮತ್ತು ತಪ್ಪಾದ ಶಿಕ್ಷಣಶಾಸ್ತ್ರ ಪೂರ್ವಕಲ್ಪನೆ**

ಅಧ್ಯಾಪನ ಎನ್ನುವುದು ಒಂದು ಸಂಕೀರ್ಣ ವೃತ್ತಿ.

ಅಧ್ಯಾಪಕನಿಗೆ ತನ್ನ ಜ್ಞಾನಕ್ಷೇತ್ರದಲ್ಲಿ ಅತ್ಯಂತ ಪ್ರಬಲ ಪರಿಕಲ್ಪನಾತ್ಮಕ ಗ್ರಹಿಕೆ ಇರಬೇಕಾಗುತ್ತದೆ. ಅತ್ಯುತ್ತಮ ಪುಸ್ತಕದ ಅರಿವಿನಿಂದ  ಬರುವ ಅಧ್ಯಾಪಕರನ್ನು ನಾವು ನೋಡಿದ್ದೇವೆ. ಆದರೆ ಇಷ್ಟೇ ಸಾಕಾಗುವುದಿಲ್ಲ. ಉದಾಹರಣೆಗೆ, ಚರಿತ್ರೆಯ ಅಧ್ಯಾಪಕರಿಗೆ ಚರಿತ್ರೆ ಎಂದರೇನು ಎನ್ನುವುದು ಗೊತ್ತಿರಬೇಕಾಗುತ್ತದೆ, ಚಾರಿತ್ರಿಕ ಜ್ಞಾನ ಹೇಗೆ ರೂಪುಗೊಳ್ಳುತ್ತದೆ ಎನ್ನುವುದು ಗೊತ್ತಿರಬೇಕಾಗುತ್ತದೆ, ಜಗತ್ತಿನ ವಿಶಾಲವಾದ ಚಾರಿತ್ರಿಕ ದೃಷ್ಟಿಕೋನ ಇತ್ಯಾದಿ ತಿಳಿದಿರಬೇಕಾಗುತ್ತದೆ. ದುರಾದೃಷ್ಟವಶಾತ್, ನಮ್ಮ ಶಾಲಾ ಮತ್ತು ಉನ್ನತ ಶಿಕ್ಷಣ ವ್ಯವಸ್ಥೆ ಆಯಾ ವಿಷಯಗಳಲ್ಲಿ ಇಂತಹ ಬಗೆಯ ಆಳವಾದ ಪರಿಕಲ್ಪನಾತ್ಮಕ ಸಾಮರ್ಥ್ಯ ಅಭಿವೃದ್ಧಿಪಡಿಸುವುದಕ್ಕೆ ಯಾವ ನೆರವನ್ನೂ ನೀಡುವುದಿಲ್ಲ.

ತರಗತಿಯಲ್ಲಿರುವ ಪ್ರತಿಯೊಬ್ಬ ವಿದ್ಯಾರ್ಥಿಯ ಬಗೆಗೂ ಆಳವಾದ ಒಳನೋಟ ಅಧ್ಯಾಪನಕ್ಕೆ ಅಗತ್ಯ. ಇದು ಸುಲಭ ಅಲ್ಲ. ವಿದ್ಯಾರ್ಥಿಗಳು ವಿಭಿನ್ನ ಕೌಟುಂಬಿಕ ಪರಿಸರದಿಂದ ಬಂದಿರುತ್ತಾರೆ. ಬಹುತೇಕ ಅಧ್ಯಾಪಕರ ಸಾಮಾನ್ಯ ಜಾತಿಯ ವರ್ಗದಿಂದ ಬಂದವರಾಗಿದ್ದು, ಆಥಿಕವಾಗಿ ಮಧ್ಯಮ ವರ್ಗದವರಾಗಿರುತ್ತಾರೆ. ಸರಕಾರಿ ಶಾಲೆಯ ಮಕ್ಕಳು ಬಡತನದ ಮನೆಗಳಿಂದ ಬರುವವರಾಗಿದ್ದು, ಬಹುತೇಕ ಪರಿಶಿಷ್ಟ ವರ್ಗ ಮತ್ತು ಪಂಗಡಗಳಿಗೆ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರುತ್ತಾರೆ.

ಬೋಧನೆಯು ಪ್ರಜಾಪ್ರಭುತ್ವೀಯ ಸಮಾಜದಲ್ಲಿ ಶಾಲೆಗಳ ಪಾತ್ರ ಏನು ಎನ್ನುವ ವಿಶಾಲ ಗ್ರಹಿಕೆಯಿಂದ ಮಾರ್ಗದರ್ಶನ ಪಡೆದಿರುವುದು ಅಗತ್ಯ. ಯಾವುದೇ ವಿಷಯದ ಸಂದರ್ಭದಲ್ಲಿ ಮಗು ಅರ್ಥವನ್ನು ಹೇಗೆ ಕಟ್ಟುತ್ತದೆ ಎಂಬ ನಿರ್ದಿಷ್ಟ ಅರಿವು ಅಂತಹ ಅಧ್ಯಾಪನಕ್ಕೆ ಇರಬೇಕಾಗುತ್ತದೆ.

ಸರಕಾರಿ ಶಾಲೆಯ ತರಗತಿಕೋಣೆ ಎನ್ನುವುದು ಅತ್ಯಂತ ಸಂಕೀರ್ಣ ರಂಗಭೂಮಿ. ಅಲ್ಲಿ ವಿಭಿನ್ನ ಬಗೆಯ ಸಾಂಸ್ಕೃತಿಕ ಮತ್ತು ಧಾರ್ಮಿಕ ಹಿನ್ನೆಲೆಯ ಮಕ್ಕಳು ಇರುತ್ತಾರೆ. ಇಲ್ಲಿ ವಿಭಿನ್ನ ಹಂತದ ಕಲಿಕೆಯಲ್ಲಿರುವ ವಿದ್ಯಾರ್ಥಿಗಳು ಇರುತ್ತಾರೆ. ಕಲಿಕೆಯ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿಭಿನ್ನ ಸಾಮರ್ಥ್ಯದವರು ಮತ್ತು ವಿವಿಧ ಆದ್ಯತೆಯವರು ಇರುತ್ತಾರೆ. ಬೇರೆ ಬೇರೆ ದರ್ಜೆಯ ವಿದ್ಯಾರ್ಥಿಗಳನ್ನು ಬಹುತೇಕ ಒಟ್ಟಿಗೇ ಕೂರಿಸುವುದರಿಂದ ಸಂಕೀರ್ಣತೆ ಇನ್ನೂ ಹೆಚ್ಚಾಗುತ್ತದೆ. ವಿಭಿನ್ನ ಭಾಷಿಕ ಹಿನ್ನೆಲೆಯಿಂದ ಬರುವವರಿದ್ದರಂತೂ ಸಂಕೀರ್ಣತೆ ಗರಿಷ್ಠ ಮಟ್ಟ ಮುಟ್ಟುತ್ತದೆ. ಈ ಭಾಷೆಗಳು ಅಧ್ಯಾಪಕರ ಭಾಷೆಗಳಲ್ಲ, ಶಾಲೆಯ ಭಾಷೆಗಳೂ ಅಲ್ಲ. ಅಲ್ಲಿ ಇರುವುದು ಕೇವಲ ಒಂದು ಭಾಷೆ ಮಾತ್ರ.

ಅಧ್ಯಾಪಕರು ವಿಷಯ ಮತ್ತು ಕಲಿಕೆದಾರನ ಗ್ರಹಿಕೆಗಳನ್ನು ಬೆಸೆಯುವುದರ ಜತೆಗೆ, ಅದನ್ನು ಸಾರ್ವಜನಿಕ ಶಿಕ್ಷಣ ಎಂಬ ವಿಶಾಲ ಉದ್ದೇಶದಲ್ಲಿ ಕೂರಿಸಬೇಕು. ಇವೆಲ್ಲವನ್ನೂ ತನ್ನ ತರಗತಿಯ ವೈವಿಧ್ಯಕ್ಕಾಗಿ ಒಗ್ಗಿಸಿಕೊಳ್ಳಬೇಕು. ಕೊನೆಯದಾಗಿ ಮಕ್ಕಳ ಜತೆಗೆ ಅಧ್ಯಾಪನದ ಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದಕ್ಕಾಗಿ ಈ ಹಂತದಲ್ಲಿ ಅಧ್ಯಾಪಕಿ ತನ್ನೆಲ್ಲ ಸಾಮರ್ಥ್ಯವನ್ನು ಒಟ್ಟುಗೂಡಿಸುತ್ತಾರಲ್ಲ ಅದನ್ನೇ ಶಿಕ್ಷಣಶಾಸ್ತ್ರ ಅನ್ನುತ್ತಾರೆ.

ನಮ್ಮ ತಪ್ಪಾದ ಶಿಕ್ಷಣಶಾಸ್ತ್ರ ಪೂರ್ವಕಲ್ಪನೆ ಇದು: ಬಹುತೇಕ ಮಕ್ಕಳು ಹೇಗೆ ಕಲಿಯುತ್ತಾರೆ, ಅದಕ್ಕಾಗಿ ಹೇಗೆ ಕಲಿಸಬೇಕು ಎನ್ನುವುದು ಅಧ್ಯಾಪಕರಿಗೆ ಗೊತ್ತಿರುವುದಿಲ್ಲ. (ಇನ್ನೂ ಸ್ಪಷ್ಟಪಡಿಸಬೇಕೆಂದರೆ, ಇದು ಸ್ವತಃ ಅಧ್ಯಾಪಕರ ಬಗೆಗ ಇರುವ ಹೇಳಿಕೆ ಅಲ್ಲ, ಆದರೆ ಇದು ಭಾರತದಲ್ಲಿನ ಶಿಕ್ಷಕ ಶಿಕ್ಷಣದ ದಯನೀಯ ಸ್ಥಿತಿಯನ್ನು ಪ್ರತಿಫಲಿಸುತ್ತಿದೆ.) [10]

ಬಹುತೇಕ ಹೊಸ ಅಧ್ಯಾಪಕರು ಬಹಳ ಗಂಭೀರವಾಗಿಯೇ ತಮ್ಮ ವೃತ್ತಿ ಆರಂಭಿಸುತ್ತಾರೆ, ತಮ್ಮ ದಾರಿಯನ್ನೇ ಬಿಟ್ಟು ಕೆಲಸ ಸಾಧಿಸುತ್ತಾರೆ. ಹೀಗಿದ್ದರೂ, ಅವರು ತಮ್ಮ ವೃತ್ತಿಗಾಗಿ ಸಾಕಷ್ಟು ತಯಾರಿ ಮಾಡಿಕೊಳ್ಳದೇ ಇರುವುದರಿಂದ ಅವರಿಗೆ ವೃತ್ತಿಯಲ್ಲೂ ಸಾಕಷ್ಟು ಬೆಂಬಲ ಸಿಗುವುದಿಲ್ಲ, ಇದೊಂದು ಬಗೆಯ ಸೋಲುವ ಯುದ್ಧವಾಗಿ ಬಿಡುತ್ತದೆ. ಕೆಲವು ತಿಂಗಳುಗಳ (ಅಥವಾ ಕೆಲ ವರ್ಷಗಳ) ಪ್ರಯತ್ನದಲ್ಲಿ ಸೆಣಸಾಡುತ್ತಾ ಬಹುತೇಕ ಅಧ್ಯಾಪಕಿಯರು ಅತ್ಯಂತ ಕಡಿಮೆ ಪರಿಣಾಮದ ಶಿಕ್ಷಣಶಾಸ್ತ್ರದ

---

10 ಈಗ ಇರುವ ಅತ್ಯಂತ ದೊಡ್ಡ ತುರ್ತು ಎಂದರೆ ಸ್ಪರ್ಧಾತ್ಮಕವಲ್ಲದ(ತಪ್ಪಾದ) ಕಾಲೇಜುಗಳ ನಮ್ಮ ನಿರಾಶಾಜನಕ ಶಿಕ್ಷಕ ಶಿಕ್ಷಣ ವ್ಯವಸ್ಥೆಯನ್ನು ಸಂಪೂರ್ಣ ಕಳಚಿ, ಅಲ್ಲಿ ತಳಮಟ್ಟದಿಂದಲೇ ಹೊಸ ವ್ಯವಸ್ಥೆಯನ್ನು ಕಟ್ಟಬೇಕಾಗಿದೆ. ಶಿಕ್ಷಕರು ಮತ್ತು ಶಿಕ್ಷಣದ ಕುರಿತ ಹೊಸ ರಾಷ್ಟ್ರೀಯ ಮಿಷನ್ ಅಂತಹ ಸಂದರ್ಭ ಒದಗಿಸಬಹುದು ಎನ್ನುವುದು ನಿರೀಕ್ಷೆ.

ವಿಧಾನದಲ್ಲಿ ಕೊನೆಯಾಗುತ್ತಾರೆ, ಇಂತಹ ವಿಧಾನಗಳು ಬಹುತೇಕ ಉಪನ್ಯಾಸಗಳನ್ನೋ, ನೆನಪಿರಿಸುವಿಕೆಯನ್ನೋ, ದಂಡನೆ ಮತ್ತು ಬೆತ್ತಗಳನ್ನೋ ಒಳಗೊಂಡಿರುತ್ತವೆ.

ಹಾಗಿದ್ದರೂ, ಇಲ್ಲಿನ ಕೊನೆಯ ಕೆಲವು ವಾಕ್ಯಖಂಡಗಳು ದಯನೀಯ ಚಿತ್ರವನ್ನು ಚಿತ್ರಿಸಿವೆ. ಇಲ್ಲಿ ಹತಾಶೆಗಿಂತ ಹೆಚ್ಚು ಆಶಾಭಾವನೆ ಇದೆ. ನಮ್ಮ ಅನುಭವದ ಪ್ರಕಾರ, ಈ ವಿಷಯದ ಕುರಿತು ಬಹು ಸಂಖ್ಯೆಯ ಅಧ್ಯಾಪಕರು ಮತ್ತು ಇತರರು ನಿಜವಾದ ಕಾಳಜಿ ಹೊಂದಿದ್ದಾರೆ. ಸೂಕ್ತ ಬೆಂಬಲ ನೀಡಿದರೆ, ಅವರು ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬಂದು ತಮ್ಮ ವೃತ್ತಿಸಂಬಂಧೀ ಸಾಮರ್ಥ್ಯವನ್ನು ಪುನರ್‌ರಚಿಸುತ್ತಾರೆ.

ನಾವು ಕೆಲಸ ಮಾಡಿದ ಜಿಲ್ಲೆಗಳಲ್ಲಿ ಹತ್ತಿರ ಹತ್ತಿರ 25 ಶೇಕಡಾದಷ್ಟು ಸರಕಾರಿ ಅಧ್ಯಾಪಕರು ಮತ್ತು ಮುಖ್ಯ ಅಧ್ಯಾಪಕರು ತಮ್ಮ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವುದಕ್ಕಾಗಿ ತಮ್ಮ ವೈಯಕ್ತಿಕ ಸಮಯವನ್ನು (ಶಾಲಾ ಸಮಯದ ನಂತರ, ವಾರಾಂತ್ಯ ಮತ್ತು ರಜಾದಿನಗಳನ್ನು) ನೀಡಿದ್ದಾರೆ. ನಮ್ಮಲ್ಲಿ ಎಷ್ಟು ಮಂದಿ ತಿಂಗಳು ತಿಂಗಳು ನಮ್ಮ ಉದ್ಯೋಗವನ್ನು ಇನ್ನಷ್ಟು ಚೆನ್ನಾಗಿ ಮಾಡುವುದಕ್ಕಾಗಿ ನಮ್ಮ ರಜಾದಿನವನ್ನು ತ್ಯಾಗಮಾಡುವುದಕ್ಕೆ ಸಿದ್ಧರಿದ್ದೇವೆ? ಆದರೆ ಅವರು ಅಂತಹ ತ್ಯಾಗ ಮಾಡಿದ್ದಾರೆ. ಅವರು ಯಾಕೆ ಹಾಗೆ ಮಾಡಿದ್ದಾರೆ ಎಂದರೆ ಅವರಿಗೆ ಅವರ ವೃತ್ತಿಯ ಬಗೆಗೆ ಕಾಳಜಿ ಇದೆ ಮತ್ತು ಅವರಿಗೆ ತಮ್ಮ ಮಕ್ಕಳ ಮೇಲೆ ಕಳಕಳಿ ಇದೆ.

**ಖಾಸಗಿ ಶಾಲೆಗಳ ಅಗಾಧ ಬೆಳವಣಿಗೆ**

ನಮ್ಮ ದೇಶಕ್ಕೆ ದೃಢವಾದ ಸರಕಾರಿ ಶಾಲಾ ವ್ಯವಸ್ಥೆ ಬೇಕಾಗಿದೆ. ಒಂದು ಆರೋಗ್ಯಕರ ಪ್ರಜಾಪ್ರಭುತ್ವಕ್ಕೆ ಎಂತಹ ಶಾಲಾ ವ್ಯವಸ್ಥೆ ಬೇಕೆಂದರೆ, ಅದು ತನ್ನ ಆದರ್ಶಗಳಿಗೆ ಸಕ್ರಿಯವಾಗಿ ದುಡಿಯುವಂತಹ, ಪ್ರಜಾಪ್ರಭುತ್ವದ ಮೌಲ್ಯಗಳಿಗೆ, ವೈಚಾರಿಕ ಆಲೋಚನೆಗಳಿಗೆ ವಿದ್ಯಾರ್ಥಿಗಳನ್ನು ತೆರೆದುಕೊಳ್ಳುವಂತಹ ಶಾಲಾ ವ್ಯವಸ್ಥೆ ಬೇಕಾಗಿದೆ. ಸರಕಾರಿ ಶಾಲೆಯ ಹೊರತು ನಾನು ಇಲ್ಲಿ ಬೇರೆ ಇನ್ನಿತರ ಯಾವುದೇ ರಚನೆಯನ್ನೂ ದೃಶ್ಯೀಕರಿಸುವುದು ಸಾಧ್ಯವಿಲ್ಲ. ಸರಕಾರಿ ಶಾಲೆಯ ಆ ರಚನೆ ಮಾತ್ರ ದೇಶದ ಬೇಡಿಕೆಗಳಿಗಾಗಿ ಪೂರ್ಣ ಅಳತೆ ಮತ್ತು ಪ್ರಮಾಣದಲ್ಲಿ ತನ್ನ ಪಾತ್ರವನ್ನು ನಿರ್ವಹಿಸಬಲ್ಲುದು.

ತಮ್ಮ ಸ್ವಭಾವಕ್ಕನುಗುಣವಾಗಿ ಖಾಸಗಿ ಶಾಲೆಗಳು ಈ ಉದ್ದೇಶವನ್ನು ಈಡೇರಿಸಲಾರವು. ತಮ್ಮ ತಮ್ಮ ಸಮುದಾಯಗಳ ಆಶೋತ್ತರಗಳನ್ನು ತಕ್ಷಣಕ್ಕೆ ಈಡೇರಿಸುವುದು ಮಾತ್ರ ಈ ಖಾಸಗಿ ಉದ್ಯಮ ಚಾಲಿತ ಶಾಲೆಗಳ[11] ಸಹಜ ಇಂಗಿತ. ಹೀಗೆ ಅಣಬೆಯಂತೆ ಲಾಭಕ್ಕಾಗಿ ಶಾಲೆಗಳು ಬೆಳೆಯುತ್ತಿವೆ(ಕಾಗದದಲ್ಲಿ ಅಲ್ಲದಿದ್ದರೂ ಅನುಷ್ಠಾನದಲ್ಲಿ ಇದೆ). ಇದರಲ್ಲಿ ವಿವಿಧ ಶುಲ್ಕಗಳ ಶಾಲೆಗಳಿವೆ– ತಿಂಗಳಿಗೆ ನೂರು ರೂಪಾಯಿಯಿಂದ ಶುರುವಾಗಿ ತಿಂಗಳಿಗೆ ಒಂದು ಲಕ್ಷ ರೂಪಾಯಿ ವರೆಗೆ ಈ ಶುಲ್ಕಗಳಿವೆ.

ಇದರ ನೇರ ಪರಿಣಾಮ ಎಂದರೆ, ಖಾಸಗಿ ಶಾಲೆಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಒಂದೇ ಬಗೆಯಲ್ಲಿರುವ ಗುಂಪುಗಳಿಗೆ ಸಹಾಯ ಮಾಡುತ್ತವೆ. ಹೀಗೆ ಸಾಮಾಜಿಕ ತರತಮವನ್ನು ಹೆಚ್ಚಿಸುತ್ತವೆ. ಹೀಗೆ ಮಾಡುವುದರ ಮೂಲಕ ನಮ್ಮ ಸಮಾಜದ ಹೃದಯದಲ್ಲಿ ಅಸಮಾನತೆಯನ್ನು ವಿನ್ಯಾಸಗೊಳಿಸುತ್ತಿದ್ದೇವೆ. ನನಗೆ ಖಾಸಗಿ ಶಾಲೆಗಳ ವಿರುದ್ಧ ಹೋರಾಡುವುದು ಸಾಧ್ಯವಿಲ್ಲ, ನನಗೆ ಗೊತ್ತು, ಕೆಲವು ಅದ್ಭುತ ಖಾಸಗಿ ಶಾಲೆಗಳಿವೆ, ಇಡಿಯಾಗಿ ನೋಡಿದರೆ, ಖಾಸಗಿ ಶಾಲಾ ವ್ಯವಸ್ಥೆ ಪ್ರಜಾಪ್ರಭುತ್ವದ ಶಾಲಾ ವ್ಯವಸ್ಥೆಯ ಉದ್ದೇಶವನ್ನು ನಿರಾಶಾಜನಕವಾಗಿಯಷ್ಟೇ ನೆರವೇರಿಸುತ್ತಿದೆ.

ಈಗ, ಖಾಸಗಿ ಶಾಲೆಗಳು ಅಲ್ಪ ಪ್ರಮಾಣದ ವಿದ್ಯಾರ್ಥಿಗಳಿಗೆ ಮಾತ್ರ ಶಿಕ್ಷಣ ನೀಡುತ್ತಿದ್ದರೆ, ಅದು ಮಹತ್ವದ ಕಾಳಜಿಗೆ ಕಾರಣವಾಗುತ್ತಿರಲಿಲ್ಲ. ಆದರೆ ಭಾರತದಲ್ಲಿ ಸ್ಥಿತಿ ಹಾಗೆ ಇಲ್ಲ. ಭಾರತದ ಪಟ್ಟಣಗಳಲ್ಲಿರುವ ಶೇಕಡಾ 67ರಷ್ಟು ವಿದ್ಯಾರ್ಥಿಗಳು ಖಾಸಗಿ ಶಾಲೆಗೆ ಹೋಗುತ್ತಾರೆ. ಈ ಸಂಖ್ಯೆ ಗ್ರಾಮೀಣ ಪ್ರದೇಶಕ್ಕೆ ಬಂದಾಗ ಶೇಕಡಾ 23ಕ್ಕೆ ಇಳಿಯುತ್ತದೆ. ಇಲ್ಲೂ ತ್ವರಿತಗತಿಯ ಬದಲಾವಣೆ ಘಟಿಸುವುದನ್ನು ಈ ಧೋರಣೆ ಸ್ಪಷ್ಟವಾಗಿ ತೋರಿಸುತ್ತಿದೆ. ಮುಂದಿನ ದಶಕದಲ್ಲಿ ಇಡಿಯ ಭಾರತದಲ್ಲಿ ಸರಕಾರಿ ಶಾಲೆಗಳ ಮಕ್ಕಳ ಸಂಖ್ಯೆಗಿಂತ ಖಾಸಗಿ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ.

ಭಾರತದಾದ್ಯಂತ ದೊಡ್ಡ ಸಂಖ್ಯೆಯಲ್ಲಿ ಖಾಸಗೀಕರಣದ ಪರ ಲಾಬಿ ಇದ್ದು, ಖಾಸಗೀಕರಣ ಒಳ್ಳೆಯದೆಂದೇ ಪ್ರತಿಪಾದಿಸುತ್ತಿದೆ. ಖಾಸಗೀ ಶಾಲೆಗಳು ಉತ್ತಮ ನಿರ್ವಹಣೆ ತೋರುತ್ತಿವೆ ಎನ್ನುವುದು ಅವರ ವಾದ. ಜಗತ್ತಿನಾದ್ಯಂತ ಇರುವ

---

11 ಲಾಭದ ಉದ್ದೇಶವಿಲ್ಲದೇ, ಕೇವಲ ಸಾಮಾಜಿಕ ಉದ್ದೇಶಕ್ಕಾಗಿ ನಡೆಸಲಾಗುತ್ತಿರುವ ಅನೇಕ ಖಾಸಗಿ ಶಾಲೆಗಳಿವೆ. ಅಂತಹ ಶಾಲೆಗಳನ್ನು ನಾನು ಇಲ್ಲಿ ಉಲ್ಲೇಖಿಸುತ್ತಿಲ್ಲ.

ಸಾಕ್ಷ್ಯಗಳು ಎತ್ತಿಹೇಳುವುದೇನೆಂದರೆ, ಖಾಸಗಿ ಶಾಲೆಗಳು ಸರಕಾರಿ ಶಾಲೆಗಳಂತೆ ವಿದ್ಯಾರ್ಥಿಗಳ ಕಲಿಕೆಗೆ ಯಾವ ಕೊಡುಗೆಯನ್ನೂ ನೀಡುವುದಿಲ್ಲ. [12]

ನಾವು ಈಗಾಗಲೇ ನೋಡಿದ ಹಾಗೆ, ಸರಕಾರಿ ಶಾಲೆಗಳೊಂದಿಗೆ ಸ್ಪರ್ಧಿಸುತ್ತಿರುವ ಹೆಚ್ಚಿನ ಖಾಸಗಿ ಶಾಲೆಗಳು ಗುತ್ತಿಗೆ ಕಾರ್ಮಿಕರ ಸಂಬಳದ ಆಧಾರದಲ್ಲಿ ಅನರ್ಹ ಅಧ್ಯಾಪಕರನ್ನು ನೇಮಕ ಮಾಡಿಕೊಂಡಿವೆ. ಅವು ಅತ್ಯಂತ ನಿಬಿಡ ಮತ್ತು ಅಸುರಕ್ಷಿತ ಪರಿಸರದಲ್ಲಿ ಕಾರ್ಯನಿರ್ವಹಿಸುತ್ತಿವೆ. ಸ್ವೀಕೃತವಾಗಿರುವ ಶಿಕ್ಷಣಶಾಸ್ತ್ರ ಪರಿಕರಗಳ ಬಗ್ಗೆ ಇರುವ ಭಯ ಗಮನಾರ್ಹ. ಮಗುವಿಗಾಗಿ ಶಾಲಾ ಅಭ್ಯಾಸಗಳನ್ನು ಒಗ್ಗಿಸುವಅತ್ಯಲ್ಪ ಪ್ರಯತ್ನಗಳಷ್ಟೇ ಇಲ್ಲಿವೆ. ಇದು ಮುಂದೆ ನಮ್ಮ ವಿದ್ಯಾರ್ಥಿಗಳ ಮುಖ್ಯ ಶೈಕ್ಷಣಿಕ ಭವಿಷ್ಯವಾಗಲಿದ್ದು, ಇದು  ಯೋಚನೆಗೆ ಈಡು ಮಾಡುವ ವಿಚಾರ.

ಇದು ಸಾರ್ವಜನಿಕದಿಂದ ಖಾಸಗಿ ಸೇವೆಗಳಿಗೆ ಹೊರಳುವ ಈ ತಿರುವು ಬೃಹತ್ ಸಾಮಾಜಿಕ ಹೊರಳುವಿಕೆಯ ಭಾಗ ಎಂದೇ ಅನೇಕ ಮಂದಿ ಭಾವಿಸಿದ್ದಾರೆ. ಉದಾರವಾದಿ ಮಾರುಕಟ್ಟೆ ಆರ್ಥಿಕತೆಯೊಂದಿಗೆ ಸಾರ್ವಜನಿಕ ಸಂಸ್ಥೆಗಳ ಬಗೆಗಿನ ಹೆಚ್ಚುತ್ತಿರುವ ಅಪನಂಬಿಕೆಯೂ ಉರಿವ ಬೆಂಕಿಗೆ ತುಪ್ಪ ಎರೆದಿದೆ. ಇಲ್ಲಿನ ಮುಖ್ಯವಿಚಾರ ಎಂದರೆ, ಶಿಕ್ಷಣ ವ್ಯಾಪಾರ ಮಾಡುವಂತಹ ಸೇವೆಯಲ್ಲ, ಅದೊಂದು ನಾಗರಿಕತೆ ಮತ್ತು ರಾಷ್ಟ್ರವನ್ನು ಬೆಳೆಸುವ ಸಾಮಾಜಿಕ ಪ್ರಕ್ರಿಯೆ.

**ಮುಕ್ತಾಯ**

ಸರ್ಕಾರಿ ಶಾಲಾ ವ್ಯವಸ್ಥೆ ನಿರ್ಣಾಯಕ ಮತ್ತು ಮಹತ್ವದ ಹೆಜ್ಜೆಗಳ ಪ್ರಗತಿಯನ್ನು ಕಂಡಿದೆ. ಈ ವಿಶಾಲ ದೇಶದ ಪ್ರತಿ ಮೂಲೆಗೂ ಅದು ವಿಸ್ತರಿಸಿಕೊಂಡಿದೆ. ಅದು ಅತ್ಯಂತ ಬಡಹಿನ್ನೆಲೆಯ ವಿದ್ಯಾರ್ಥಿಗಳೂ ಶಾಲೆಗೆ ಬರುವಂತೆ ಪ್ರಚೋದನೆ ನೀಡಿದೆ.

ಪ್ರತಿ ದಿನ ಈ ವ್ಯವಸ್ಥೆ ಸಾಗುತ್ತಲೇ ಇದೆ. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಶಾಲೆಗೆ ಬರುತ್ತಾರೆ. ಅಲ್ಲಿ ಬೋಧನೆ ಮತ್ತು ಕಲಿಕೆಯ ಅಸಲೀ ಪ್ರಯತ್ನ ಇದೆ.

ಹೀಗಿದ್ದರೂ, ವಿದ್ಯಾರ್ಥಿ ಕಲಿಕೆ ಎನ್ನುವುದು ತೃಪ್ತಿಕರವಾಗಿಯೇನೂ ಇಲ್ಲ. ಈ ವ್ಯವಸ್ಥೆಯನ್ನು ವಿದ್ಯಾರ್ಥಿಗಳಿಗಾಗಿ ಹೇಗೆ ನಿರ್ವಹಿಸಬಹುದು ಎನ್ನುವುದೇ ನಮ್ಮ ಮುಂದೆ ಇರಬೇಕಾದ ಚಿಂತನೆ. ಅದಕ್ಕಾಗಿ ನಮ್ಮ ಅಧ್ಯಾಪಕರು ಮತ್ತು ಶಾಲಾ ನಾಯಕರಿಗೆ ವಿಶೇಷ ಸಿದ್ಧತೆಯನ್ನು ಮತ್ತು ಇನ್ನಷ್ಟು ಉತ್ತಮ ಬೆಂಬಲವನ್ನು ನೀಡಬೇಕಾಗಿದೆ.

ಭಾರತೀಯ ಶಿಕ್ಷಣದ ದೊಡ್ಡ ಸವಾಲು ಎಂದರೆ ಅಣಬೆಗಳಂತೆ ಬೆಳೆಯುತ್ತಿರುವ ಖಾಸಗೀ ಶಾಲೆಗಳೇ ಆಗಿವೆ. ಹೆತ್ತವರು ಎಷ್ಟು ಹಣ ನೀಡುತ್ತಾರೆ ಎನ್ನುವ ಆಧಾರದಲ್ಲಿ ಇವು ಶೈಕ್ಷಣಿಕ ಅವಕಾಶಗಳನ್ನು ವರ್ಗೀಕರಿಸುತ್ತವೆ. ಇತರ ವಿಚಾರಗಳಂತೆ ಈ ಕ್ಷಿಪ್ರಗತಿಯ ಶಾಲಾ ಶಿಕ್ಷಣದ ಖಾಸಗೀಕರಣವು, ಈ ಶಾಲೆಗಳು ಉಳಿದವುಗಳಿಗಿಂತ ಉತ್ತಮ ಎಂಬ ಹುಸಿ ನಂಬಿಕೆಯಿಂದಲೇ ತ್ವರಿತಗತಿ ಪಡೆದುಕೊಂಡಿವೆ. ಇದಕ್ಕೆ ಇರುವ, ನಾವು ಕಲ್ಪಿಸಬಹುದಾದ ಏಕೈಕ ಪ್ರತಿಕ್ರಿಯೆ ಎಂದರೆ ಸರಕಾರಿ ಶಾಲೆಗಳ ಗುಣಮಟ್ಟ ವೃದ್ಧಿ ಮಾಡುವುದೇ ಆಗಿದೆ. ಅದು ಆರೋಹಣದ ಗತಿ ಕಾಣುತ್ತದೆಯೇ ಎನ್ನುವುದನ್ನು ಕಾಲವೇ ಹೇಳಬೇಕಷ್ಟೇ.

ನಿಜವಾಗಿಯೂ ಸರಕಾರಿ ಶಾಲಾ ವ್ಯವಸ್ಥೆಯಯನ್ನು ಅರ್ಥಮಾಡಬೇಕಿದ್ದರೆ ಅದರ ದಶಕಗಳ ನೋಟವನ್ನು ನೋಡಬೇಕು. ಆಗ ಅದು ಅಧಃಪತನಗೊಳ್ಳುವ ವ್ಯವಸ್ಥೆ ಅಲ್ಲ, ನಿಧಾನಕ್ಕೆ ಪ್ರಬುದ್ಧವಾಗುತ್ತಿರುವ ವ್ಯವಸ್ಥೆ ಎನ್ನುವುದು ಅರ್ಥವಾಗುತ್ತದೆ. ಸೂಕ್ತ ಬೆಂಬಲ ಇದ್ದರೆ ಅದು ಮತ್ತಷ್ಟು ಸುಧಾರಿಸಿಕೊಳ್ಳಬಹುದು.

---

12 ಭಾರತೀಯ ಸಂದರ್ಭಗಳ ಇಂತಹ ಅಧ್ಯಯನಗಳಲ್ಲಿ ಅತ್ಯಂತ ಮಹತ್ವದ್ದು ಎಂದರೆ ಆಂಧ್ರಪ್ರದೇಶದ ಸುದೀರ್ಘ ಶಾಲಾ ಆಯ್ಕೆಯ ಕುರಿತ ಅಧ್ಯಯನ. ನನ್ನ ಸಹೋದ್ಯೋಗಿ ಡಿ.ಡಿ. ಕರೋಪಾಡಿ ಅವರ ವಿಶೇಷ ಇಪಿಡಬ್ಲ್ಯೂ ಲೇಖನವನ್ನು ಇಲ್ಲಿ ನೋಡಿ: http://www.epw.in/special-articles/does-school-choice-help-rural-children-disadvantaged-sections.html